ಪಬ್ಲಿಕ್ ವರ್ಕ್ಸ್.

ಇಸ್ತಿಹಾರ್ನಾಮೆ.

ತಾರೀಖು 14ನೆ ಜೂ॥ 1904.

ನಂ. 608—3412, ಮೈಸೂರು ಪಬ್ಲಿಕ್ ವರ್ಕ್ಸ್ ಇಲಾಖೆಯ ಲೋಕಲ್, ಅಪ್ಪರ್ ಸಬಾರ್ಡಿನೇಟ್ ಸಿಬ್ಬಂದಿಯಲ್ಲಿ ಇದರಡೀ ಕಂಡ ಬಡ್ತಿಗಳು ನಮೂದಿಸಲ್ಪಟ್ಟ ತಾರೀಖುಗಳಿಂದ್ಯ ಮಾಡಲ್ಪಟ್ಟಿರುತ್ತವೆ :—

ಡಿವೀಜ್.	ಹೆಸರು.	ಹಾಲಿ ಗ್ರೇಡು.	ಬಡ್ತಿ ಮಾಡಲ್ಪಟ್ಟ ಗ್ರೇಡು.	ಬಡ್ತಿಯ ಸ್ವಭಾವ.	ಯಾವಲಾಗಾಯತು.	ಪರಾ.
ಕೋಲಾರ ...	ಸಿ. ಸೂರ್ಯನಾರಾಯಣರಾಯರು	ಎರಡನೇ ಕ್ಲಾಸಿನ ಸೂಪರ್‌ವೈಜರ್	ಮೊದಲನೇ ಕ್ಲಾಸಿನ ಸೂಪರ್‌ವೈಜರ್	ಹಂಗಾಮಿ	6—1—03	ಮೆಡಿಕಲ್ ಸರ್ಟಿಫಿಕೇಟಿನ ಮೇಲೆ ರಜಾದಲ್ಲಿರುವ ಮೊದಲನೇ ಕ್ಲಾಸಿನ ಸೂಪರ್‌ವೈಜರಾದ ಎ. ಮುನಿಸ್ವಾಮಿ ಮೊದಲಿಯಾರ್‌ರಿಗೆ ಇದಲಾಗಿ
ತುಮಕೂರು ..	ಬಿ. ವಸಂತಪ್ಪನವರು	ಮೂರನೇ ಕ್ಲಾಸಿನ ಸೂಪರ್‌ವೈಜರ್	ಎರಡನೇ ಕ್ಲಾಸಿನ ಸೂಪರ್‌ವೈಜರ್	ಡಿಟೋ	ಡಿಟೋ	
ಡಿಟೋ ..	ಬಿ. ಎಸ್. ಶ್ರೀಕಂಠಯ್ಯನವರು	ಮೊದಲನೇ ಕ್ಲಾಸಿನ ಓವರ್‌ಸೀರು	ಮೂರನೇ ಕ್ಲಾಸಿನ ಸೂಪರ್‌ವೈಜರ್	ಡಿಟೋ	ಡಿಟೋ	
ಕಡೂರು ..	ಮೆ॥ ಜಿ. ಟಿ. ಕಿಂಗ್ ಯವರು	ಎರಡನೇ ಕ್ಲಾಸಿನ ಓವರ್‌ಸೀರು	ಮೊದಲನೇ ಕ್ಲಾಸಿನ ಓವರ್‌ಸೀರು	ಡಿಟೋ	ಡಿಟೋ	
ಹಾಸನ ..	ಎಚ್. ಎಸ್. ವೆಂಕಟಾಚಾರ್ಯ	ಮೂರನೇ ಕ್ಲಾಸಿನ ಓವರ್‌ಸೀರು	ಎರಡನೇ ಕ್ಲಾಸಿನ ಓವರ್‌ಸೀರು	ಡಿಟೋ	ಡಿಟೋ	
ಪಂಗಳೂರು ..	ಡಿ. ಸಂಜೀವಯ್ಯನವರು	ಮೊದಲನೇ ಕ್ಲಾಸಿನ ಸಬ್ ಓವರ್‌ಸೀರು	ಮೂರನೇ ಕ್ಲಾಸಿನ ಓವರ್‌ಸೀರು	ಡಿಟೋ	ಡಿಟೋ	ಹಾಲಿ ಇರುವ ಸಂಬಳವಂದರೆ 70 ರೂಪಾಯಿಗಳ ತಲಬಿನ ಮೇಲೆ

ಹುಕುಂ ಬಮೋಜೀಬ್,
ಡಬ್ಲ್ಯೂ. ಮೆಕ್‌ಜರ್ಕೀ,
ಪಬ್ಲಿಕ್ ವರ್ಕ್ಸ್ ಇಲಾಖಾ, ಮೈಸೂರು ಗವರ್ನ್‌ಮೆಂಟ್ ಸೆಕ್ರಟರಿ.

ಜಿಯೊಲಾಜಿಕಲ್.

ಇಸ್ತಿಹಾರ್‌ನಾಮೆ.

ತಾರೀಖು 10ನೆ ಜೂ॥ 1904.

ನಂ. 777—S, ಸ॥1897ನೆ ಇಸವಿ ಮೈಸೂರು ಕೀಮೆ ಗಣಿ ಸಂಬಂಧದ 3ನೆ ನಂಬರು ರೆಗ್ಯುಲೇಷನಿನ 2 (4)ನೆ ಸೆಕ್ಷನ್ನನ್ನು ಅನುಸರಿಸಿ, ಮೈಸೂರು ಕೀಮೆಯು ಘನವನ್ನು ಹೊಂದಿದ ಶ್ರೀಮಂ॥ ಮಹಾರಾಜರವರ ಸರ್ಕಾರದವರು ಜಾರಿಯಲ್ಲಿ ತರಬೇಕೆಂದು ಉದ್ದೇಶಿಸಿರುವ ಇದರಡೀ ಕಂಡ ಮಸೂದೆ ಇಸ್ತಿಹಾರ್‌ನಾಮೆಯು ಜನಗಳ ತಿಳುವಳಿಕೆ ಬಗ್ಗೆ ಪ್ರಕಟಿಸಲ್ಪಟ್ಟಿರುತ್ತೆ.

2. ಸದರಿ ಇಸ್ತಿಹಾರ್‌ನಾಮೆಗೆ ಸಂಬಂಧಪಟ್ಟ ವಿಷಯದಲ್ಲಿ ಅಭ್ಯಂತರಗಳು ಅಥವಾ ಸಲಹೆಗಳು ಏನಾದರೂ ಇದ್ದರ ಅವುಗಳನ್ನು ಸ॥1904ನೆ ಇಸವಿ ಸೆಪ್ಟಂಬರು 15ನೆ ತಾರೀಖಿನ ವಳಗಾಗಿ ಘನವನ್ನು ಹೊಂದಿದ ಶ್ರೀಮಂ॥ ಮಹಾರಾಜರವರ ಸರ್ಕಾರದ ಜಿಯೊಲಾಜಿಕಲ್ ಇಲಾಖಾ ಸೆಕ್ರಿಟರಿ ಸಾಹೇಬರವರಿಗೆ ತಿಳಿಸಿದಲ್ಲಿ ಅವುಗಳು ಆಲೋಚಿಸಲ್ಪಡುತ್ತವೆ.

ಮೆಸೂದೆ.

ಇಸ್ತಿಹಾರ್.

ತಾರೀಖು 13 ಜೂ॥ 1904.

ಸ॥ 1897ನೆ ಇಸವಿ ಮೈಸೂರು ಕೀಮೆ ಗಣಿ ಸಂಬಂಧದ 111ನೆ ನಂಬರು ರೆಗ್ಯುಲೇಷನ್ 2 (4)ನೆ ಸೆಕ್ಷನ್ನನ್ನು ಅನುಸರಿಸಿ, ಘನವನ್ನು ಹೊಂದಿದ ಶ್ರೀಮಂ॥ ಮಹಾರಾಜರವರ ಸರ್ಕಾರದವರು "ಕಳ್ಳು ಇದ್ದಲು" ಸ॥ 1897ನೆ ಇಸವಿ ಡಿಸೆಂಬರು 11ನೆ ತಾರೀಖು ನಂ. 6751—ಮಿಸ್. 1405ನೆ ಇಸ್ತಿಹಾರ್‌ನಾಮೆಯಲ್ಲಿ ನಮೂದಿಸಲ್ಪಟ್ಟಿರುವ ಮತ್ತು ಮೇಲ್ಕಂಡ ರೆಗ್ಯುಲೇಷನಿನ 4, 7 ಮತ್ತು 8ನೆ ಸೆಕ್ಷನ್‌ಗಳ ನಿಬಂಧನೆಗಳಿಗೆ ತೀರಿಸಲ್ಪಟ್ಟ ಪ್ರದೇಶಗಳಲ್ಲಿ "ಗಣಿ ಪದಾರ್ಥ" (Mining Material)ಕ್ಕೆ ಕೆಲಸಲ್ಪಟ್ಟಿರುತ್ತೆಂದು ಹುಕುಂ ಮಾಡಿರುತ್ತಾರೆ.

ಹುಕುಂ ಬಮೋಜೀಬ್,
ಡಬ್ಲ್ಯೂ ಎಫ್. ಸ್ಮೀತ್,
ಮೈಸೂರು ಗವರ್ನ್‌ಮೆಂಟ್ ಜಿಯೊಲಾಜಿಕಲ್ ಇಲಾಖಾ ಸೆಕ್ರಿಟರಿ.